# <u>4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

ಎಸ್‌ಸಿ. 160/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸುರೇಶ್ | | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| **ತಂದೆ/ಗಂಡನ ಹೆಸರು** | ಃ ಶ್ರೀ ಸಿದ್ದಯ್ಯ | | **13.08.2024** |
| **ವಯಸ್ಸು** | ಃ **44** ವರ್ಷ | | |
| **ವೃತ್ತಿ** | ಃ ಹೆಚ್.ಸಿ, ಲಷ್ಕರ್ ಪೋಲೀಸ್ ಠಾಣೆ | **ಪ್ರಾ.ಸಾ.** | ಃ **11** |
| **ವಾಸಸ್ಥಳ** | ಃ ಹೂಟಗಳ್ಳಿ | **ಚಾ.ಸಾ.** | ಃ **20** |

<u>**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**</u>

. ನಾನು *2018* ರಿಂದ *2024* ಜುಲೈ ವರೆಗೆ ದೇವರಾಜ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ಮಾಡಿದ್ದೆ. ದಿಃ*07.07.2022* ರಂದು ಪಿ.ಎಸ್.ಐ-ರಾಜು ರವರು ನನ್ನನ್ನು ಮತ್ತು ಹೆಚ್.ಸಿ-*450* ವೇಣುಗೋಪಾಲ್ ಇವರನ್ನು ಮೊ.ಸಂಖ್ಯೆ *5/2022* ಪ್ರಕರಣದಲ್ಲಿ ಆರೋಪಿತರ ಪತ್ತೆಗಾಗಿ ನೇಮಿಸಿದ್ದರು. ಅದರಂತೆ ಬಾತ್ಮಿದಾರರ ಮಾಹಿತಿ ಮೇರೆಗೆ ಆ ದಿನ ಮದ್ಯಾಹ್ಣ *3.30* ಕ್ಕೆ ಮೇಟಗಳ್ಳಿ ಠಾಣೆ ಸರಹದ್ದಿನ ಆರ್.ಬಿ.ಐ ರಸ್ತೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದ ಈ ಪ್ರಕರಣದ *1* ನೇ ಆರೋಪಿತ ಸೋಮಶೇಖರ್ ಇವರನ್ನು ವಶಕ್ಕೆ ಪಡೆದು ಅವರ ಹೆಸರು ವಿಳಾಸ ತಿಳಿದುಕೊಂಡು ಅವರೇ *1* ನೇ ಆರೋಪಿ ಎಂದು ಖಚಿತಪಡಿಸಿಕೊಂಡು ವಾಪಸ್ಸು ಠಾಣೆಗೆ ಬಂದು ಅವರನ್ನು ಹಾಜರುಪಡಿಸಿ ವರದಿ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ-*23* ಮತ್ತು ಸಹಿಯನ್ನು ನಿ.ಪಿ-

*23(ಎ)* ಎಂದು ಗುರುತಿಸಿದೆ. ಕೋರ್ಟ್ ಮುಂದೆ ಇರುವ *1* ನೇ ಆರೋಪಿತನೇ ಆ ದಿನ ನಾವು ವಶಕ್ಕೆ ಪಡೆದು ಹಾಜರುಪಡಿಸಿದ್ದ ಸೋಮಶೇಖರ ಎನ್ನುವ ಆರೋಪಿತ ಇರುತ್ತಾನೆ.

ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಆರ್ ರವರಿಂದಃ-

*2.* ದಿನಾಲೂ ಬೆಳಗ್ಗೆ ಠಾಣಾಧಿಕಾರಿ ನಮ್ಮನ್ನು ಕರ್ತವ್ಯಕ್ಕೆ ನೇಮಿಸುತ್ತಾರೆ ಎಂದರೆ ನಿಜ. ನಮ್ಮ ಕರ್ತವ್ಯದ ಮುಕ್ತಾಯದ ಬಳಿಕ ಆ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿಯಲ್ಲ. ಆ ಬಗ್ಗೆ ಠಾಣಾಧಿಕಾರಿ ನಮೂದು ಮಾಡುತ್ತಾರೆ. ಆ ದಿನ ನಾನು *1* ನೇ ಆರೋಪಿತನನ್ನು ವಶಕ್ಕೆ ಪಡೆದ ನಂತರ ಅವರ ಅಂಗ ಶೋಧನೆ ಅಥವಾ ಪಂಚನಾಮೆ ಮಾಡಿಲ್ಲ. ನನ್ನ ಸಮಕ್ಷಮ ಠಾಣಾಧಿಕಾರಿ ಅಂಗ ಶೋಧನೆ ಅಥವಾ ಪಂಚನಾಮೆ ಮಾಡಿಲ್ಲ. ನಾನು *1* ನೇ ಆರೋಪಿತನನ್ನು ಮನೆಯಿಂದ ಕರೆದುಕೊಂಡು ಬಂದಿದ್ದೆ ಎಂದರೆ ಸರಿಯಲ್ಲ. ತನಿಖಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವರದಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

***2* ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು